50 ಸುವರ್ಣ ಸಂಭ್ರಮ

## ನಿಮ್ಮೊಡನೆ

# ಮಾನ್ಯತೆ ಮತ್ತು ಜವಾಬ್ದಾರಿ

ಸಾಮಾಜಿಕ ಆಚರಣೆಗಳ ಹಿನ್ನೆಲೆಯಲ್ಲಿ ಪರಂಪರೆಯನ್ನು ರಕ್ಷಿಸುವ ಕುರಿತು ವೀರಾವೇಶದ ಮಾತುಗಳು ಚಲಾವಣೆಯಲ್ಲಿ ಇರುವ ದಿನಗಳಿವು. ಆದರೆ, ನಾವು ನಿಜವಾಗಿ ರಕ್ಷಿಸಬೇಕಾದ ಪರಂಪರೆ ನಮ್ಮ ಕಲೆ, ಪರಿಸರಗಳಿಗೆ ಸಂಬಂಧಿಸಿದ್ದು.

ವಿಶ್ವಸಂಸ್ಥೆಯ 'ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಆಯೋಗ'ದ (ಯುನೆಸ್ಕೋ) 'ವಿಶ್ವ ಪಾರಂಪರಿಕ ಪಟ್ಟಿ'ಗಳ ತಾಣದಲ್ಲಿ ರಾಜ್ಯದ ಆರು ತಾಣಗಳು ಹೊಸದಾಗಿ ಪ್ರವೇಶ ಪಡೆದಿವೆ. ವಿಶಿಷ್ಟ ಸ್ಮಾರಕ– ಗುಮ್ಮಟಗಳನ್ನು ಹೊಂದಿರುವ ಗುಲ್ಬರ್ಗ, ಬೀದರ್, ಬಿಜಾಪುರ ಹಾಗೂ ಹೊಯ್ಸಳ ವಾಸ್ತುಶಿಲ್ಪ ಶೈಲಿಯ ದೇವಾಲಯಗಳಿರುವ ಹಾಸನ ಜಿಲ್ಲೆಯ ಬೇಲೂರು, ಹಳೇಬೀಡು ಮತ್ತು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ– ಇವು ಯುನೆಸ್ಕೋ ಗುರ್ತಿಸಿರುವ ಹೊಸ ಪಾರಂಪರಿಕ ತಾಣಗಳು. ಈಗಾಗಲೇ ಹಂಪಿ, ಪಟ್ಟದಕಲ್ಲು ಹಾಗೂ ಪಶ್ಚಿಮ ಘಟ್ಟಗಳು ಈ ಪಟ್ಟಿಯಲ್ಲಿದ್ದು, ಪ್ರಸ್ತುತ ಆರು ತಾಣಗಳ ಸೇರ್ಪಡೆಯಿಂದ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ದೊರೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಸ ವ್ಯಕ್ತಪಡಿಸಿದ್ದಾರೆ.

ವಿಶ್ವ ಪಾರಂಪರಿಕ ಪಟ್ಟಿಗೆ ಸೇರ್ಪಡೆಯಾಗುವುದು ಯಾವುದೇ ಒಂದು ಪ್ರದೇಶಕ್ಕೆ ಹಾಗೂ ಅದನ್ನೊಳಗೊಂಡ ನಾಡಿಗೆ ಪ್ರತಿಷ್ಠೆಯ ಸಂಗತಿ. ಈ ಸೇರ್ಪಡೆಯಿಂದ ಜಾಗತಿಕ ಪ್ರವಾಸಿಗರ ಗಮನ ಇತ್ತ ಹರಿಯುವುದರ ಜೊತೆಗೆ, ಸ್ಮಾರಕಗಳ ರಕ್ಷಣೆ ಮತ್ತು ಆ ಪರಿಸರದ ಅಭಿವೃದ್ಧಿ ಗಮನಾರ್ಹ ಪ್ರಮಾಣದಲ್ಲಿ ಸಾಧ್ಯವಾಗುತ್ತದೆ. ಹಾಗಾಗಿಯೇ ಯುನೆಸ್ಕೋ ಮಾನ್ಯತೆಯನ್ನು ಹೊಂದಲಿಕ್ಕಾಗಿ ಅನೇಕ ದೇಶಗಳು ಲಾಬಿ ನಡೆಸುತ್ತವೆ. ತಮ್ಮ ವ್ಯಾಪ್ತಿಯಲ್ಲಿನ ಐತಿಹಾಸಿಕ ಕಟ್ಟಡಗಳು, ಪುರಾತನ ಪ್ರದೇಶಗಳನ್ನು ಸಂರಕ್ಷಿಸುವ ಮೂಲಕ ಹಾಗೂ ಆ ಬಗ್ಗೆ ತಜ್ಞರಿಂದ ವರದಿಗಳನ್ನು ರೂಪಿಸುವ ಮೂಲಕ ಯುನೆಸ್ಕೋ ಗಮನಸೆಳೆಯಲು ಹರಸಾಹಸ ಪಡುತ್ತವೆ. ಆದರೆ, ವಿಶ್ವ ಪರಂಪರೆ ಪಟ್ಟಿಯ ಬಗ್ಗೆ ನಮ್ಮ ಇತ್ತೀಚಿನ ನಡವಳಿಕೆಗಳು ಆಶಾದಾಯಕವಾಗಿಯೇನೂ ಇಲ್ಲ. ಎರಡು ವರ್ಷಗಳ ಹಿಂದೆ ಪಶ್ಚಿಮ ಘಟ್ಟಗಳನ್ನು 'ವಿಶ್ವ ಪರಂಪರೆಯ ತಾಣ' ಎಂದು ಗುರ್ತಿಸುವ ಯುನೆಸ್ಕೋದ ನಿರ್ಧಾರವನ್ನು ಖಂಡಿಸಿ ರಾಜ್ಯ ವಿಧಾನಸಭೆಯ ಶಾಸಕರು ಸರ್ವಾನುಮತದ ನಿರ್ಣಯ ಕೈಗೊಂಡಿದ್ದರು. ಕೊಡಗಿಗೆ ಈ ಸ್ಥಾನಮಾನ ದೊರಕಿಸಿಕೊಡುವ ಬಗ್ಗೆಯೂ ಅಲ್ಲಿ ಸಾಕಷ್ಟು ಪ್ರತಿರೋಧ ವ್ಯಕ್ತವಾಗಿದೆ. ಇಂಥ ಪ್ರತಿರೋಧಗಳ ಹಿಂದೆ ರಾಜಕೀಯ ಹಿತಾಸಕ್ತಿಗಳು ಕೆಲಸ ಮಾಡುತ್ತಿರುವುದನ್ನು ಗಮನಿಸಬೇಕು.

ಪಶ್ಚಿಮ ಘಟ್ಟಗಳಲ್ಲಿ ಅಪಾರ ಪ್ರಮಾಣದ ಸಸ್ಯ ಹಾಗೂ ಜೀವವೈವಿಧ್ಯವಿದೆ. ರಮಣೀಯ ನೈಸರ್ಗಿಕ ತಾಣಗಳು ಅಲ್ಲಿವೆ. ಇವುಗಳನ್ನು ಕಾಪಾಡಿಕೊಳ್ಳುವುದು ಪ್ರಗತಿಯ ಸಂಕೇತ ಎಂದು ನಮಗೆ ತೋರುವುದಿಲ್ಲ. ಬದಲಿಗೆ, ಅಭಿವೃದ್ಧಿ ಚಟುವಟಿಕೆಗಳೆಂದರೆ ರಿಯಲ್ ಎಸ್ಟೇಟ್ ಚಟುವಟಿಕೆಗಳು ಹಾಗೂ ಗಣಿಗಾರಿಕೆ ಎನ್ನುವ ಯೋಚನಾಕ್ರಮ ನಮ್ಮ ರಾಜಕೀಯ ಮುಖಂಡರಲ್ಲಿದೆ. ಆ ಕಾರಣದಿಂದಲೇ ಪಶ್ಚಿಮ ಘಟ್ಟಗಳ ಸಂರಕ್ಷಣೆಯ ವಿಷಯದಲ್ಲಿ, ಕಸ್ತೂರಿರಂಗನ್ ವರದಿಯನ್ನು ಒಪ್ಪಿಕೊಳ್ಳುವಲ್ಲಿ ಚೌಕಾಸಿಯ ನಿಲುವು ವ್ಯಕ್ತವಾಗುತ್ತದೆ. ಸ್ಥಳೀಯ ಜನರು, ವಿಶೇಷವಾಗಿ ಬುಡಕಟ್ಟು ಜನರ ಬದುಕಿಗೆ ಈ ಮಾನ್ಯತೆಯಿಂದ ತೊಂದರೆಯಾಗುತ್ತದೆ ಹಾಗೂ ಈ ಪ್ರದೇಶಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ಅವಕಾಶ ಇರುವುದಿಲ್ಲ ಎಂದು ಜನಸಾಮಾನ್ಯರನ್ನು ನಂಬಿಸುವ ಪ್ರಯತ್ನ ನಡೆಯುತ್ತದೆ.

ಸಾಮಾಜಿಕ ಆಚರಣೆಗಳ ಹಿನ್ನೆಲೆಯಲ್ಲಿ ಪರಂಪರೆಯನ್ನು ರಕ್ಷಿಸುವ ಕುರಿತು ವೀರಾವೇಶದ ಮಾತುಗಳು ಚಲಾವಣೆಯಲ್ಲಿ ಇರುವ ದಿನಗಳಿವು. ಆದರೆ, ನಾವು ನಿಜವಾಗಿ ರಕ್ಷಿಸಬೇಕಾದ ಪರಂಪರೆ ನಮ್ಮ ಕಲೆ, ಪರಿಸರಗಳಿಗೆ ಸಂಬಂಧಿಸಿದ್ದು.

ಯುನೆಸ್ಕೋ ಮಾನ್ಯತೆಯಿಂದ ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶ ದೊರೆಯುತ್ತದೆ. ಈ ಅನುಕೂಲವನ್ನು ಬಳಸಿಕೊಂಡು ವಿಶ್ವದ ಅನೇಕ ದೇಶಗಳು ಪ್ರವಾಸೋದ್ಯಮವನ್ನು ತಮ್ಮ ಪ್ರಮುಖ ಆದಾಯ ಮೂಲವನ್ನಾಗಿ ರೂಪಿಸಿಕೊಂಡಿವೆ. ಅಂಥ ಪ್ರಯತ್ನಗಳಿಗೆ ಕರ್ನಾಟಕದಲ್ಲಿ ಕೂಡ ಸಾಕಷ್ಟು ಅವಕಾಶಗಳಿವೆ. ಮುಂದಿನ ದಿನಗಳಲ್ಲಿ ಮೈಸೂರು, ಸೋಮನಾಥಪುರ, ಐಹೊಳೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು ಎನ್ನುವ ಮುಖ್ಯಮಂತ್ರಿಗಳ ಮಾತಿನಲ್ಲಿ ರಾಜ್ಯವನ್ನು ದೇಶದ ಪ್ರಮುಖ ಪ್ರವಾಸೋದ್ಯಮ ಕೇಂದ್ರಗಳಲ್ಲೊಂದಾಗಿ ರೂಪಿಸುವ ಇಂಗಿತ ಇದ್ದಂತಿದೆ. ಅದು ಸ್ವಾಗತಾರ್ಹ. ಆದರೆ, ಇದು ಸುಲಭದ ಕೆಲಸವೇನಲ್ಲ. ಪ್ರಸ್ತುತ ಯುನೆಸ್ಕೋ ಪಟ್ಟಿಗೆ ಸೇರ್ಪಡೆಯಾಗಿರುವ ಆರು ತಾಣಗಳ ವಿಷಯವನ್ನೇ ನೋಡಿ: ಈಗ ದೊರೆತಿರುವುದು ತಾತ್ಕಾಲಿಕ ಮಾನ್ಯತೆ ಮಾತ್ರ. ಮುಂದಿನ ದಿನಗಳಲ್ಲಿ ಈ ತಾಣಗಳ ನಿರ್ವಹಣೆ, ಸಂರಕ್ಷಣೆ ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಗಮನಿಸಿ ಮಾನ್ಯತೆಯನ್ನು ಕಾಯಂಗೊಳಿಸುವ ಬಗ್ಗೆ ಯುನೆಸ್ಕೋ ನಿರ್ಧರಿಸುತ್ತದೆ. ಅಂದರೆ, ಈ ಹೊಸ ತಾಣಗಳ ಬಗ್ಗೆ ರಾಜ್ಯ ಸರ್ಕಾರದ ಮುತುವರ್ಜಿಯನ್ನು ಯುನೆಸ್ಕೋ ಗಮನಿಸುತ್ತಿರುತ್ತಿದೆ. ಹಾಗಾಗಿಯೇ 'ಯುನೆಸ್ಕೋ ಮಾನ್ಯತೆ' ಎನ್ನುವುದು ಸಂತಸವಷ್ಟೇ ಆಗಿರದೆ, ಅದೊಂದು ಗುರುತರ ಜವಾಬ್ದಾರಿಯೂ ಹೌದೆನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

■ **ರಘುನಾಥ ಚ.ಹ.**

